ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್,ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಪಿ.ಬಿ. ರಸ್ತೆ ಚಿತ್ರದುರ್ಗ–577501
ದೂರವಾಣಿ: 08194–235464 Email:dhochitradurga@gmail.com

ಸಂಖ್ಯೆ: ಜಿ.ಆ.ಕು.ಕ.ಚಿ.ಗುಪಾಅ/01/2026–27 ದಿನಾಂಕ: 02–11–2026

:ಪತ್ರಿಕಾ ಪ್ರಕಟಣೆ:

ವಿಷಯ : ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯ ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಪ್ರಾ.ಆ.ಕೇಂದ್ರಗಳಲ್ಲಿ ಖಾಲಿ ಇರುವ ಫಾರ್ಮಸಿ ಅಧಿಕಾರಿ ಹುದ್ದೆಗಳ ಪೈಕಿ 24 ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಾಕಾತಿ ಕುರಿತು.

ಉಲ್ಲೇಖ 1. ಮಾನ್ಯ ಆಯುಕ್ತರು ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರ ಸಂ: ಇ–ಆಪೀಸ್–1840947 ದಿನಾಂಕ: 15–06–2026

2. ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಚಿತ್ರದುರ್ಗ ರವರ ಅನುಮೋದನೆ ದಿನಾಂಕ:23–09–2026

****

ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯ ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಪ್ರಾ.ಆ.ಕೇಂದ್ರಗಳಲ್ಲಿ ಖಾಲಿ ಇರುವ ಫಾರ್ಮಸಿ ಅಧಿಕಾರಿ ಹುದ್ದೆಗಳ ಪೈಕಿ 24 ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಡಿ.ಫಾರ್ಮಸಿ ವಿದ್ಯಾರ್ಹತೆಯನ್ನು ಹೊಂದಿರುವ ಹಾಗೂ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ತರಬೇತಿ ಪಡೆದಿರುವ ಮತ್ತು ಕರ್ನಾಟಕ ಫಾರ್ಮಸಿ ಕೌನ್ಸಿಲಿಂಗ್‌ನಲ್ಲಿ ನೊಂದಣಿಯಾಗಿರುವ ಅಭ್ಯರ್ಥಿಗಳನ್ನು ಒಂದು (1) ವರ್ಷದ ಅವಧಿಗೆ ಅಥವಾ ಖಾಯಂ ಫಾರ್ಮಸಿ ಅಧಿಕಾರಿಗಳನ್ನು ನೇಮಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ **ರೋಸ್ಟರ್ ಕಂ ಮೆರಿಟ್ ಆಧಾರದ ಮೇಲೆ** ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕ:02–11–2026 ರಿಂದ ದಿನಾಂಕ:16–11–2026 ರ ಸಂಜೆ 5.30 ರೊಳಗಾಗಿ ಬಯೋಡಾಟಾದೊಂದಿಗೆ ವಿದ್ಯಾರ್ಹತೆಯ ದೃಢೀಕೃತ ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಬಹುದು. (ಸದರಿ ನೇಮಕಾತಿಗಳು ಆರೋಗ್ಯ ಮತ್ತು ಕು.ಕ.ಇಲಾಖೆ ನಿಯಾಮವಳಿಯ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ)

ವಿದ್ಯಾರ್ಹತೆ :– ಡಿ.ಫಾರ್ಮಸಿ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಹಾಗೂ ಕರ್ನಾಟಕ ಫಾರ್ಮಸಿ ಕೌನ್ಸಿಲಿಂಗ್‌ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಿರಬೇಕು.

ಸೂಚನೆ:– ಆಭ್ಯರ್ಥಿಯ ವಯಸ್ಸು 45 ವರ್ಷ ಒಳಗಿರತಕ್ಕದ್ದು.

ದಾಖಲೆಗಳು:

- 01 ಪಾಸ್ ಪೋರ್ಟ ಸೈಜ್ ಪೋಟೋಗಳು
- ಆಧಾರ್ ಕಾರ್ಡ್.
- ಎಸ್.ಎಸ್.ಎಲ್.ಸಿ. ಅಂಕಪಟ್ಟಿ.
- ಡಿ.ಫಾರ್ಮಸಿ ಅಂಕಪಟ್ಟಿ.
- ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲಿಂಗ್‌ನಲ್ಲಿ ನೋಂದಣಿಯಾಗಿರುವ ಪ್ರಮಾಣ ಪತ್ರ.

- ಜಾತಿ ಪ್ರಮಾಣ ಪತ್ರ.
- ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ.
- ಅಂಗವಿಕಲ ಅಭ್ಯರ್ಥಿ ಪ್ರಮಾಣ ಪತ್ರ
- ಕನ್ನಡ ಮಾಧ್ಯಮ ಪ್ರಮಾಣ ಪತ್ರ.
- ಮಾಜಿ ಸೈನಿಕ ಅಭ್ಯರ್ಥಿ ಪ್ರಮಾಣ ಪತ್ರ.
- ಯೋಜನಾ ನಿರಾಶ್ರಿತ ಅಭ್ಯರ್ಥಿ ಪ್ರಮಾಣ ಪತ್ರ.
- ತೃತೀಯ ಲಿಂಗಿ ಅಭ್ಯರ್ಥಿ ಪ್ರಮಾಣ ಪತ್ರ

ಹುದ್ದೆವಾರು ಮಿಸಲಾತಿ ವಿವರಗಳು ಕೆಳಕಂಡಂತಿವೆ

ಕ್ರ.ಸಂ	ಮೀಸಲಾತಿ	ಇತರೆ	ಮ.ಅ	ಗ್ರಾ .ಅ	ಅಂ.ವಿ	ಮಾ.ಸೈ	ಒಟ್ಟು
1	ಸಾ.ಆ	2	5	3	1	1	12
2	ಪ.ಜಾ–(ಪ್ರ–ಎ)	1	1	–	–	–	2
3	ಪ.ಜಾ–(ಪ್ರ–ಬಿ)	1	–	–	–	–	1
4	ಪ.ಜಾ–(ಪ್ರ–ಸಿ)	1	–	–	–	–	1
5	ಪ.ಪಂ.	1	–	–	–	–	1
6	ಪ್ರವರ್ಗ–1	1	–	–	–	–	1
7	ಪ್ರವರ್ಗ2(ಎ)	1	1	1	–	–	3
8	ಪ್ರವರ್ಗ2(ಬಿ)	1	–	–	–	–	1
9	ಪ್ರವರ್ಗ3(ಎ)	1	–	–	–	–	1
10	ಪ್ರವರ್ಗ3(ಬಿ)	1	–	–	–	–	1
		11	7	4	1	1	24

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
ಚಿತ್ರದುರ್ಗ.